ಈ) ಅನ್ನಭಾಗ್ಯ ಯೋಜನೆಗೆ ಬೇಕಾಗುವ ಒಟ್ಟು ಪ್ರಮಾಣದ 3.08 ಲಕ್ಷ ಮೆ.ಟನ್ ಆಹಾರಧಾನ್ಯಗಳ ಪೈಕಿ, ಕೇಂದ್ರ ಸರ್ಕಾರದಿಂದ 2.04 ಲಕ್ಷ ಮೆಟ್ರಿಕ್ ಟನ್ ಬಿಡುಗಡೆಯಾಗುತ್ತಿದ್ದು, ಉಳಿಕೆ ಪ್ರಮಾಣ 1.04 ಲಕ್ಷ ಮೆ.ಟನ್ ಅನ್ನು ರಾಜ್ಯ ಸರ್ಕಾರವು ವಿವಿಧ ಮೂಲಗಳಿಂದ ಖರೀದಿಸುತ್ತಿದ್ದು, ಇದರ ಒಟ್ಟು ಮೌಲ್ಯ ಪ್ರತಿ ಮಾಹೆಗೆ ₹ 265.20 ಕೋಟಿ ಆಗುತ್ತದೆ. ಸಾಮಾನ್ಯ ದರ್ಜೆಯ ಅಕ್ಕಿಯನ್ನು ಪಾರದರ್ಶಕವಾಗಿ ಇ-ಟೆಂಡರ್ ಮೂಲಕ ಹಾಗೂ ಅನ್ನ ರಾಜ್ಯ ಛತ್ತಿಸಗಡ್ ಆಹಾರ ನಿಗಮದಿಂದ ಖರೀದಿಸಿ ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ರಾಜ್ಯದಲ್ಲಿ ಪೂರೈಸಲಾಗುತ್ತಿದೆ.

ಉ) ಅನ್ನಭಾಗ್ಯ ಯೋಜನೆಯಿಂದ ಯಾವುದೇ ನಷ್ಟವಿರುವುದಿಲ್ಲ.

ಊ) ರಾಗಿ ಮತ್ತು ಜೋಳವನ್ನು ಸಾರ್ವಜನಿಕ ವಿತರಣಾ ಪದ್ಧತಿಯಡಿಯಲ್ಲಿ ವಿತರಿಸಲು ಸರ್ಕಾರ ಯೋಚಿಸಿದ್ದು, ರಾಗಿ ಮತ್ತು ಜೋಳ ಖರೀದಿಗೆ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದವರು ಟೆಂಡರ್ ಕರೆದಿದ್ದು ಅವುಗಳ ಪರಿಶೀಲನೆ ನಡೆದಿದೆ.

ಸಮಾಜ ಕಲ್ಯಾಣ ಇಲಾಖೆಯ ಸೌಲಭ್ಯಗಳು

476(940); ಡಾ॥ ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರ ಕಲ್ಯಾಣಕ್ಕೆ ಸಮಾಜ ಕಲ್ಯಾಣ ಇಲಾಖೆಯಿಂದ ವಾರ್ಷಿಕವಾಗಿ ಎಷ್ಟು ಹಣ ವಿನಿಯೋಗ ವಾಗುತ್ತಿದೆ; (ಕಾರ್ಯಕ್ರಮಗಳ ಪೂರ್ಣ ವಿವರ ನೀಡುವುದು)

ಆ) ಅಲ್ಪಸಂಖ್ಯಾತರ ಕಲ್ಯಾಣಕ್ಕಾಗಿ ಬಿಡುಗಡೆ ಆಗಿರುವ ಒಟ್ಟು ಅನುದಾನದ ಮೊತ್ತ ಹಾಗೂ ಕಾರ್ಯಕ್ರಮಗಳ ವಿವರ ನೀಡುವುದು,

ಇ) ಹಿಂದುಳಿದ ವರ್ಗಗಳ ನಿಗಮದ ಅಡಿ ವಿಶೇಷವಾಗಿ ಅನುಕೂಲ ಪಡೆಯುವಂತಹ ಜಾತಿಗಳು ಹಾಗೂ ಇದರ ಕಾರ್ಯಕ್ರಮಗಳ ಸಂಪೂರ್ಣ ವಿವರ ನೀಡುವುದು,

ಈ) ಒಕ್ಕಲಿಗ, ವೀರಶೈವ, ಬಣಜಿಗ ಜಾತಿಗೆ ಸೇರಿದ ಬಡವರಿಗೆ ಹಿಂದುಳಿದ ವರ್ಗಗಳ ನಿಗಮ ಹಾಗೂ ಸಮಾಜ ಕಲ್ಯಾಣ ಇಲಾಖೆಯಿಂದ ಯಾವ ಮಾದರಿಯ ಸವಲತ್ತುಗಳನ್ನು ಒದಗಿಸಲಾಗುವುದು; (ಸಮಗ್ರ ಮಾಹಿತಿಯನ್ನು ಅಂಕಿ-ಅಂಶ ಸಮೇತ ವಿವರಿಸುವುದು)

ಉ) ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರಕ್ಕೆ ತಲಾ ಐದು ಕೋಟಿ ರೂ. ವೆಚ್ಚದಲ್ಲಿ ಅಂಬೇಡ್ಕರ್ ಭವನ, ಜಗಜೀವನ್ ರಾಮ್ ಭವನ ಹಾಗೂ ವಾಲ್ಮೀಕಿ ಭವನ ಕಟ್ಟಡ ನಿರ್ಮಾಣ ಕಾರ್ಯದ ಪ್ರಕ್ರಿಯೆ ಯಾವ ಹಂತದಲ್ಲಿದೆ; ಈ ಬಗ್ಗೆ ಸರ್ಕಾರದ ನಿರ್ದಿಷ್ಟ ಗುರಿ ಹಾಗೂ ನಿರ್ಮಾಣ ಯೋಜನೆಯ ವಿವರ ಸಲ್ಲಿಸುವುದು;

ಊ) ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಯಾವ ಮಾನದಂಡ ಹಾಗೂ ಕಾರ್ಯ ಯೋಜನೆ ಹಮ್ಮಿಕೊಳ್ಳಲಾಗಿದೆ?

ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)

ಅ) 2013-14ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಜನರ ಅಭಿವೃದ್ಧಿಗಾಗಿ ಯೋಜನಾ ಕಾರ್ಯಕ್ರಮಗಳಲ್ಲಿ ಒಟ್ಟು ₹ 1763.49 ಕೋಟಿಗಳು ಮತ್ತು ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ₹ 404.25 ಕೋಟಿಗಳನ್ನು ವಿನಿಯೋಗಿಸಲಾಗುತ್ತಿದೆ.

ಪರಿಶಿಷ್ಟ ಪಂಗಡದವರ ಅಭಿವೃದ್ಧಿಗಾಗಿ ಯೋಜನಾ ಕಾರ್ಯಕ್ರಮಗಳಲ್ಲಿ ಒಟ್ಟು ₹ 750.04 ಕೋಟಿಗಳು ಮತ್ತು ಯೋಜನೇತರ ಕಾರ್ಯಕ್ರಮಗಳಡಿಯಲ್ಲಿ ₹ 87.24 ಕೋಟಿಗಳನ್ನು

ವಿನಿಯೋಗಿಸಲಾಗುತ್ತಿದೆ. ಕಾರ್ಯಕ್ರಮಗಳ ಸಂಕ್ಷಿಪ್ತ ವಿವರಗಳು ಈ ಕೆಳಗಿನಂತಿವೆ.

1) ಸಮಾಜ ಕಲ್ಯಾಣ ಇಲಾಖೆ, ಪರಿಶಿಷ್ಟ ಪಂಗಡಗಳ ಇಲಾಖೆ ಹಾಗೂ ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ಇವುಗಳ ಮುಖಾಂತರ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

ಅ) ವಿದ್ಯಾರ್ಥಿ ನಿಲಯಗಳ ನಿರ್ವಹಣೆ.

ಆ) ಆಶ್ರಮ ಶಾಲೆಗಳು, ಮೊರಾರ್ಜಿ ದೇಸಾಯಿ ವಸತಿ/ಕಿತ್ತೂರು ರಾಣಿ ಚೆನ್ನಮ್ಮ ಹಾಗೂ ಏಕಲವ್ಯ ಮಾದರಿ ವಸತಿ ಶಾಲೆಗಳ ನಿರ್ವಹಣೆ.

ಇ) ವಿವಿಧ ವಿದ್ಯಾರ್ಥಿ ವೇತನಗಳ ಮಂಜೂರಾತಿ, ಪ್ರೋತ್ಸಾಹ ಧನ ವಿತರಣೆ.

ಈ) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ಸಿ.ಸಿ. ರಸ್ತೆ, ಒಳಚರಂಡಿ, ಕುಡಿಯುವ ನೀರು ಇತ್ಯಾದಿಗಳನ್ನು ಒದಗಿಸುವುದು.

ಉ) ಈ ಜನಾಂಗದವರು ಹೆಚ್ಚಾಗಿ ವಾಸಿಸುತ್ತಿರುವ ಸ್ಥಳಗಳಲ್ಲಿ ಡಾ. ಬಿ ಆರ್. ಅಂಬೇಡ್ಕರ್/ಡಾ॥ ಜಗಜೀವನ ರಾಂ/ ವಾಲ್ಮೀಕಿ ಭವನ ಹಾಗೂ ಸಮುದಾಯ ಭವನಗಳನ್ನು ನಿರ್ಮಾಣ ಮಾಡಲಾಗುತ್ತಿದೆ

ಊ) ಇದಲ್ಲದೇ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅರ್ಹ ಅಭ್ಯರ್ಥಿಗಳಿಗೆ ಜಿ.ಎನ್.ಎಂ/ಬಿ.ಎಸ್ಸಿ ನರ್ಸಿಂಗ್ ಹಾಗೂ ಪ್ಯಾರಾ ಮೆಡಿಕಲ್ ಕೋರ್ಸ್‌ಗಳಲ್ಲಿ ವ್ಯಾಸಾಂಗ ಮಾಡಲು ಅವಕಾಶ ಕಲ್ಪಿಸಲಾಗಿದೆ ಮತ್ತು ವಿವಿಧ ಕೌಶಲ್ಯ, ಅಭಿವೃದ್ಧಿ

ಹೊಂದಲು ಸಿಪೆಟ್, ನಿಫ್ಟ್ ಮತ್ತು ಎ.ಟಿ.ಡಿ ಸಿ ಸಂಸ್ಥೆಗಳ ಮೂಲಕ ತರಬೇತಿ ಹಾಗೂ ಕಾನೂನು ಪದವೀಧರರಿಗೆ ತರಬೇತಿ ನೀಡಲಾಗುತ್ತಿದೆ. ದೌರ್ಜನ್ಯ ಪ್ರಕರಣಗಳಲ್ಲಿ ನೊಂದ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಜನರಿಗಾಗಿ ಪರಿಹಾರ ಧನ, ಪುನರ್ವಸತಿ ಕಾರ್ಯಕ್ರಮಗಳು ಹಾಗೂ ಕೊಲೆ ಪ್ರಕರಣಗಳಲ್ಲಿ ಕುಟುಂಬದ ಅವಲಂಭಿತರಿಗೆ ಸರ್ಕಾರಿ ನೌಕರಿ ನೀಡುವ ಅವಕಾಶ ಕಲ್ಪಿಸಲಾಗಿದೆ.

2) ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ಡಾ. ಬಿ.ಆರ್.ಅಂಬೇಡ್ಕರ್ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳ ವತಿಯಿಂದ ಈ ಕೆಳಕಂಡ ಕಾರ್ಯಕ್ರಮಗಳನ್ನು ಅನುಷ್ಠಾನ ಮಾಡಲಾಗುತ್ತಿದೆ.

ಅ) ಗಂಗಾ ಕಲ್ಯಾಣ ಯೋಜನೆ

ಆ) ಭೂ ಒಡೆತನ ಯೋಜನೆ

ಇ) ಸ್ವಯಂ ಉದ್ಯೋಗ ಯೋಜನೆ

ಈ) ಮೈಕ್ರೋ ಕ್ರೆಡಿಟ್ ಯೋಜನೆ ಇತ್ಯಾದಿ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಆ) **ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ:** 2013–14ನೇ ಸಾಲಿನಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಕಾರ್ಯಕ್ರಮಗಳಿಗೆ ಒದಗಿಸಲಾದ ಆಯವ್ಯಯ ಹಾಗೂ ಬಿಡುಗಡೆಯಾದ ಅನುದಾನ ವಿವರಗಳನ್ನು ಅನುಬಂಧ 3ರಲ್ಲಿ ನೀಡಲಾಗಿದೆ.

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮಕ್ಕೆ 2013–14ನೇ ಸಾಲಿಗೆ ದಿನಾಂಕ 25/11/2013 ರವರೆಗೆ ₹ 70.98 ಕೋಟಿಗಳನ್ನು ಸರ್ಕಾರವು ಬಿಡುಗಡೆ ಮಾಡಿರುತ್ತದೆ. ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 2013–14ನೇ ಸಾಲಿಗೆ ಈ ಕೆಳಕಂಡ ಯೋಜನೆಗಳನ್ನು ಹಮ್ಮಿಕೊಳ್ಳಲಾಗಿದೆ.

1. ಸ್ವಾವಲಂಬನ ಮಾರ್ಜಿನ್ ಹಣ ಸಾಲ ಮತ್ತು ಸಹಾಯಧನ ಯೋಜನೆ
2. ಅರಿವು (ವಿದ್ಯಾಭ್ಯಾಸ) ಸಾಲಯೋಜನೆ
3. ಗಂಗಾ ಕಲ್ಯಾಣ ಯೋಜನೆ
4. ಶ್ರಮಶಕ್ತಿ ಯೋಜನೆ
5. ಮೈಕ್ರೋ ಸಾಲ ಮತ್ತು ಸಹಾಯಧನ ಯೋಜನೆ.
6. ಕ್ರಿಶ್ಚಿಯನ್ ಸಮುದಾಯದ ಅಭಿವೃದ್ಧಿ ಯೋಜನೆ.

ಇ) **ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ**ದಿಂದ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಸರ್ಕಾರದ ಆದೇಶ ಸಂಖ್ಯೆ: ಸಕಇ 225 ಬಿಸಿಎ 2000, ದಿನಾಂಕ· 30/03/2002ರ ಆದೇಶದಲ್ಲಿ ವರ್ಗೀಕರಿಸಿರುವ ಪ್ರವರ್ಗ–1, 2ಎ, 3ಎ ಮತ್ತು 3ಬಿನಲ್ಲಿ ಬರುವ ಒಟ್ಟು 206 ಜಾತಿಗಳು ಮತ್ತು 591 ಉಪಜಾತಿಗಳು ಸೇರಿ ಒಟ್ಟು 797 ಜಾತಿಗಳಿಗೆ ಸೇರಿದ ಜನರಿಗೆ ಸೌಲಭ್ಯ ಒದಗಿಸಲಾಗುತ್ತಿದೆ

ಸರ್ಕಾರ ಆದೇಶ ಸಂಖ್ಯೆ: ಸಕಇ 573 ಬಿಸಿಎ 95, ಬೆಂಗಳೂರು, ದಿನಾಂಕ: 23/02/1996 ರನ್ವಯ ಪ್ರವರ್ಗ 1 ಮತ್ತು 2ಎ.ಗೆ ಶೇ.70ರಷ್ಟು ಮತ್ತು ಪ್ರವರ್ಗ 3ಎ–3ಬಿಗೆ ಶೇ 30ರಷ್ಟು ಮೀಸಲಾತಿ ನೀಡಿ ನಿಗಮದ ಯೋಜನೆಗಳಲ್ಲಿ ಸೌಲಭ್ಯ ಒದಗಿಸಲಾಗುತ್ತಿದೆ.

ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮದ ಕಾರ್ಯಗಳು ಹಾಗೂ ದೊರೆಯುವ ಸೌಲಭ್ಯಗಳನ್ನು ಅನುಬಂಧ–4ರಲ್ಲಿ ನೀಡಲಾಗಿದೆ.

ಈ) **ಡಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ:** ಪ್ರವರ್ಗ–3ಎ ನಲ್ಲಿ ಬರುವ ಒಕ್ಕಲಿಗ, ಬಣಜಿಗ ಮತ್ತು ಪ್ರವರ್ಗ–3ಬಿನಲ್ಲಿ ಬರುವ ವೀರಶೈವ ಜಾತಿಗೆ ಸೇರಿದ ಬಡವರಿಗೆ ನಿಗಮ ಅನುಷ್ಠಾನಗೊಳಿಸುತ್ತಿರುವ ಯೋಜನೆಗಳಲ್ಲಿ ಸರ್ಕಾರ ಆದೇಶ ಸಂಖ್ಯೆ: ಸಕಇ 573 ಬಿಸಿಎ 95, ಬೆಂಗಳೂರು, ದಿನಾಂಕ: 23/02/1996 ರನ್ವಯ ಪ್ರವರ್ಗ–3ಎ ಮತ್ತು 3ಬಿಗೆ ಶೇ.30ರಷ್ಟು ಮೀಸಲಾತಿ ನೀಡಿ ಸೌಲಭ್ಯ ಒದಗಿಸಲಾಗುತ್ತಿದೆ. ಈ ಜನಾಂಗದವರಿಗೆ ಸಾಮೂಹಿಕ ಗಂಗಾ ಕಲ್ಯಾಣ ಯೋಜನೆಯಲ್ಲಿ ಮಾತ್ರ ನೀರಾವರಿ ಸೌಲಭ್ಯ ಕಲ್ಪಿಸಲಾಗುತ್ತಿದೆ. ವೈಯಕ್ತಿಕ ನೀರಾವರಿ ಯೋಜನೆಯಲ್ಲಿ ಸೌಲಭ್ಯ ಒದಗಿಸಲು ಅವಕಾಶವಿರುವುದಿಲ್ಲ.

ಉ) ಚಿಕ್ಕಬಳ್ಳಾಪುರ ಕೇಂದ್ರಸ್ಥಾನದಲ್ಲಿ ಡಾ. ಬಿ.ಆರ್. ಅಂಬೇಡ್ಕರ್ ಭವನ ಮತ್ತು ಡಾ॥ ಬಾಬು ಜಗಜೀವನರಾಂ ಭವನಗಳನ್ನು ತಲಾ ₹ 5.00 ಕೋಟಿಗಳ ವೆಚ್ಚದಲ್ಲಿ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿರುವುದಿಲ್ಲ. ಸರ್ಕಾರಿ ಆದೇಶ ಸಂಖ್ಯೆ: ಸಕಇ 120 ಪವಯೋ 2010 ದಿ:14.09.2010ರಲ್ಲಿ ಚಿಕ್ಕಬಳ್ಳಾಪುರ ಜಿಲ್ಲಾ ಕೇಂದ್ರದಲ್ಲಿ ₹ 100.00 ಲಕ್ಷಗಳ ವೆಚ್ಚದಲ್ಲಿ ಪಾಲ್ಮೀಕಿ ಭವನ ನಿರ್ಮಾಣ ಮಾಡಲು ತಾತ್ವಿಕ ಮಂಜೂರಾತಿ ನೀಡಲಾಗಿದೆ ಪ್ರಸ್ತುತ ಸದರಿ ಭವನದ ಕಟ್ಟಡ ಕಾಮಗಾರಿಗಾಗಿ 1ನೇ ಕಂತಾಗಿ ₹ 50.00 ಲಕ್ಷಗಳನ್ನು ಈ ಕಛೇರಿ ಆದೇಶ ದಿನಾಂಕ:20.02.2011ರಲ್ಲಿ ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ರವರಿಗೆ ಬಿಡುಗಡೆ ಮಾಡಲಾಗಿದೆ ಜಿಲ್ಲಾ ಕೇಂದ್ರಗಳಲ್ಲಿ ₹ 3.00/– ಕೋಟಿ ವೆಚ್ಚದಲ್ಲಿ ಭವನಗಳನ್ನು ನಿರ್ಮಿಸುವ ಕಾರ್ಯಕ್ರಮ ಜಾರಿಯಲ್ಲಿರುತ್ತದೆ.

ಊ) ಪರಿಶಿಷ್ಟ ಜಾತಿ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ಈ ಕೆಳಕಂಡಂತೆ ಮಂಜೂರು ಮಾಡಲಾಗುತ್ತಿದೆ.

ಎಸ್.ಎಸ್.ಎಲ್.ಸಿ	ಶೇಕಡ 60 ರಿಂದ ಶೇಕಡ 74.99 ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ	₹ 7,000/-
	ಶೇಕಡ 75 ಕ್ಕಿಂತ ಹೆಚ್ಚಿನ ಅಂಕಗಳಿಸಿದ ವಿದ್ಯಾರ್ಥಿಗಳಿತೆ ಪ್ರೋತ್ಸಾಹಧನ	₹ 15,000/-
ಪಿ.ಯು.ಸಿ	ಪಿ.ಯು.ಸಿ ಪರೀಕ್ಷೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಕಲಾ/ವಿಜ್ಞಾನ/ ವಾಣಿಜ್ಯ ವಿಭಾಗಗಳಲ್ಲಿ ಅತಿ ಹೆಚ್ಚು ಅಂಕ ವಡೆದು ಡಿಸ್ಟಿಂಕ್ಷನ್‌ನಲ್ಲಿ (ಶೇಕಡ 85 ಕ್ಕಿಂತ ಹೆಚ್ಚಿಗೆ ಅಂಕ ಪಡೆದ) ತೇರ್ಗಡೆಯಾದ ಮೊದಲ 05 ವಿದ್ಯಾರ್ಥಿಗಳಿತೆ ಪ್ರೋತ್ಸಾಹಧನ	ತಲಾ ₹ 10,000/- ಗಳಂತೆ
ಪದವಿ	ಪದವಿ ಕೋರ್ಸುಗಳಲ್ಲಿ ವಿವಿಧ ವಿಶ್ವ ವಿದ್ಯಾನಿಲಯಗಳಲ್ಲಿ ಕಲೆ/ವಿಜ್ಞಾನ/ ವಾಣಿಜ್ಯ ವಿಭಾಗಗಳಲ್ಲಿ ಘೋಷಿಸಲಾದ 01 ರಿಂದ 05 ರ್‍ಯಾಂಕ್‌ಗಳಲ್ಲಿ ಪ.ಜಾತಿ ವಿದ್ಯಾರ್ಥಿಗಳಿದ್ದರೆ ಅವರಿಗೆ ಪ್ರೋತ್ಸಾಹಧನ	ತಲಾ ₹ 20,000/-
ಸ್ನಾತಕೋತ್ತರ ವದವಿ	ವಿವಿಧ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ವದವಿಯಲ್ಲಿ ಪ್ರತಿ ಕೋರ್ಸಗಳಲ್ಲಿ ಘೋಷಿಸಲಾದ 01 ರಿಂದ 05 ರ್‍ಯಾಂಕ್‌ಗಳಲ್ಲಿ ಪ.ಜಾತಿ ವಿದ್ಯಾರ್ಥಿಗಳಿದ್ದರೆ ಅವರಿಗೆ	ತಲಾ ₹ 25,000/-

	ಪ್ರೋತ್ಸಾಹಧನ	
ತಾಂತ್ರಿಕ ಕೋರ್ಸ್‌ಗಳು	ತಾಂತ್ರಿಕ ಕೋರ್ಸ್‌ಗಳಾದ ಎಂಜಿನಿಯರಿಂಗ್/ಬಿ.ಡಿ.ಎಸ್/ ಇಂಡಿಯನ್ ಮೆಡಿಸನ್/ಕೃಷಿ/ ಪಶುವೈದ್ಯಕೀಯ ಕೋರ್ಸ್‌ಗಳಲ್ಲಿ 01 ರಿಂದ 05 ರ್‍ಯಾಂಕ್‌ಗಳಲ್ಲಿ ಪ.ಜಾತಿ ವಿದ್ಯಾರ್ಥಿಗಳು ಇದ್ದರೆ ಅವರಿಗೆ ಪ್ರೋತ್ಸಾಹಧನ	ತಲಾ ₹ 25,000/–
ಎಂ.ಬಿ.ಬಿ.ಎಸ್	ಎಂ.ಬಿ.ಬಿ.ಎಸ್. ಕೋರ್ಸ್‌ಗಳಲ್ಲಿ 01 ರಿಂದ 05 ರ್‍ಯಾಂಕ್‌ಗಳಲ್ಲಿ ಪ.ಜಾತಿ ವಿದ್ಯಾರ್ಥಿಗಳಿದ್ದರೆ ಅವರಿಗೆ ಪ್ರೋತ್ಸಾಹಧನ	₹ 35,000/–

ಎಸ್.ಎಸ್.ಎಲ್.ಸಿ. ವಿದ್ಯಾರ್ಥಿಗಳ ಪ್ರೋತ್ಸಾಹಧನವನ್ನು ನಿರ್ದೇಶಕರು, ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಪಿಯುಸಿ ವಿದ್ಯಾರ್ಥಿಗಳ ಪ್ರೋತ್ಸಾಹಧನವನ್ನು ನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ ರವರ ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ. ಉಳಿದಂತೆ ರ್‍ಯಾಂಕ್ ವಿದ್ಯಾರ್ಥಿಗಳ ಪ್ರೋತ್ಸಾಹಧನವನ್ನು ಆಯುಕ್ತರ ಕಾರ್ಯಾಲಯ ದಿಂದ ವಿದ್ಯಾರ್ಥಿಗಳ ಬ್ಯಾಂಕ್ ಖಾತೆಗ ಆರ್.ಟಿ.ಜಿ.ಎಸ್. ಮೂಲಕ ಜಮಾ ಮಾಡಲಾಗುತ್ತದೆ.

ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ:

ಅ) 10ನೇ ತರಗತಿಯಲ್ಲಿ ಶೇ.75ಕ್ಕಿಂತ ಹೆಚ್ಚು ಅಂಕ ಗಳಿಸಿದ ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳಿಗೆ ₹ 15,000/– ಹಾಗೂ ಶೇ.60ಕ್ಕಿಂತ ಹೆಚ್ಚು ಅಂಕಗಳಿಸಿದ ವಿದ್ಯಾರ್ಥಿಗಳಿಗೆ ₹ 7,000/–ಗಳ ಪ್ರೋತ್ಸಾಹಧನ ನೀಡಲಾಗುತ್ತಿದೆ.

ಆ) ಮೆಟ್ರಿಕ್ ನಂತರ ಪ್ರತಿಭಾವಂತ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನವನ್ನು ಈ ಕೆಳಕಂಡಂತೆ ನೀಡಲಾಗುತ್ತಿದೆ,

ಕಾರ್ಯಕ್ರಮದ ವಿವರ	ಅನುಮೋದಿಸಿದ ಮೊತ್ತ (ಪ್ರತಿ ವಿದ್ಯಾರ್ಥಿಗಳಿಗೆ)
ಪಿಯುಸಿ. ಪರೀಕ್ಷೆಯಲ್ಲಿ ಪ್ರತಿ ಜಿಲ್ಲೆಯಲ್ಲಿ ಕಲಾ/ವಿಜ್ಞಾನ/ವಾಣಿಜ್ಯ ವಿಭಾಗಗಳಲ್ಲಿ ಅತೀ ಹೆಚ್ಚು ಅಂಕ ಪಡೆದ ಪರಿಶಿಷ್ಟ ಜಾತಿ/ಪಂಗಡದ 5 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ	₹ 10,000/-
ಪದವಿ ಕೋರ್ಸುಗಳಲ್ಲಿ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ (ಕಲಾ/ವಿಜ್ಞಾನ/ವಾಣಿಜ್ಯ ವಿಭಾಗಗಳಲ್ಲಿ) ಘೋಷಿಸಲಾದ 1 ರಿಂದ 5 ರ್‍ಯಾಂಕ್‌ಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿದ್ದರೆ ಅವರಿಗೆ ಪ್ರೋತ್ಸಾಹಧನ	₹ 20,000/-
ವಿವಿಧ ವಿಶ್ವವಿದ್ಯಾನಿಲಯಗಳ ಸ್ನಾತಕೋತ್ತರ ಪದವಿಯಲ್ಲಿ ಪ್ರತಿ ಕೋರ್ಸುಗಳಲ್ಲಿ ಘೋಷಿಸಲಾದ 1 ರಿಂದ 5 ರ್‍ಯಾಂಕ್‌ಗಳಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿದ್ದರೆ ಅವರಿಗೆ ಪ್ರೋತ್ಸಾಹಧನ	₹ 25,000/-
ತಾಂತ್ರಿಕ ಕೋರ್ಸುಗಳಾದ ಇಂಜಿನೀಯರಿಂಗ್/ ಬಿ.ಡಿ.ಎಸ್/ಇಂಡಿಯನ್ ಮೆಡಸಿನ್/ಕೃಷಿ/ಪಶುವೈದ್ಯಕೀಯ ಕೋರ್ಸುಗಳಲ್ಲಿ 1 ರಿಂದ 5 ರ್‍ಯಾಂಕ್ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿದ್ದರೆ ಅವರಿಗೆ ಪ್ರೋತ್ಸಾಹಧನ	₹ 25,000/-
ಎಂ.ಬಿ.ಬಿ.ಎಸ್ ಕೋರ್ಸುಗಳಲ್ಲಿ 1 ರಿಂದ 5 ರ್‍ಯಾಂಕ್ ಪಡೆದವರಲ್ಲಿ ಪರಿಶಿಷ್ಟ ಜಾತಿ/ಪಂಗಡದ ವಿದ್ಯಾರ್ಥಿಗಳಿದ್ದರೆ ಅವರಿಗೆ ಪ್ರೋತ್ಸಾಹಧನ	₹ 35,000/-
ಐ.ಐ.ಟಿ/ಐ.ಐ.ಎಂ/ಐ.ಐ.ಎಸ್.ಸಿ/ಎನ್.ಐ.ಟಿ. ಇತ್ಯಾದಿ ರಾಷ್ಟ್ರೀಯ ಪ್ರಸಿದ್ಧವಾದ ಸಂಸ್ಥೆಗಳಲ್ಲಿ ಪ್ರವೇಶ ಪಡೆದ ಪರಿಶಿಷ್ಟ ಜಾತಿ/ಪಂಗಡದ ಅಭ್ಯರ್ಥಿಗಳಿಗೆ ನೀಡುವ	₹ 100.000/-

ಆರ್ಥಿಕ ನೆರವನ್ನು ₹ 50.000/– ದಿಂದ ₹ 1.00 ಲಕ್ಷಕ್ಕೆ ಅಥವಾ ವಾಸ್ತವಿಕ ಫೀಸ್ ಮತ್ತು ಬೋರ್ಡಿಂಗ್ ವೆಚ್ಚ ಇತ್ಯಾದಿ ಮೊತ್ತದಲ್ಲಿ ಯಾವುದು ಕಡಿಮೆಯೋ ಅದನ್ನು ನೀಡುವುದು ಈ ನೆರವನ್ನು ವಿದ್ಯಾರ್ಥಿಯ ಕೋರ್ಸ್ ಅವಧಿಯಲ್ಲಿ ಎರಡು ಕಂತುಗಳಲ್ಲಿ ₹ 1,00,000/– ನೀಡಲಾಗುವುದು.	

ಮೇಲ್ಕಂಡ ಕಾರ್ಯಕ್ರಮವನ್ನು ಸರ್ಕಾರವು ಕಾಲ ಕಾಲಕ್ಕೆ ಹೊರಡಿಸುವ ಆದೇಶಗಳನ್ವಯ ಅನುಷ್ಠಾನಗೊಳಿಸಲಾಗತ್ತಿದೆ. ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲದಿಂದ ಎಸ್.ಎಸ್.ಎಲ್.ಸಿ ಯಲ್ಲಿ ಉತ್ತೀರ್ಣರಾಗಿ ಪಿ.ಯು.ಸಿ.ಯಲ್ಲಿ ಪ್ರವೇಶ ಪಡೆದಿದ್ದಲ್ಲಿ ಪ್ರತಿ ವಿದ್ಯಾರ್ಥಿಗೆ ₹ 3,000/– ನಂತೆ ಮತ್ತು ಪಿ.ಯು.ಸಿ.ಯಲ್ಲಿ ಉತ್ತೀರ್ಣರಾಗಿ ಪದವಿ ಕೋರ್ಸ್‌ಗೆ ಪ್ರವೇಶ ಪಡೆದಿದ್ದಲ್ಲಿ ಪ್ರತಿ ವಿದ್ಯಾರ್ಥಿಗೆ ₹ 4,000/– ಪದವಿ ಪರೀಕ್ಷೆಗಳಲ್ಲಿ ಪಾಸಾಗಿ ಸ್ನಾತಕೋತ್ತರ ಇತ್ಯಾದಿ ಉನ್ನತ ವಿದ್ಯಾಭ್ಯಾಸವನ್ನು ಮುಂದುವರೆಸಲು ₹ 5,000/–ಗಳನ್ನು ನೀಡಲಾಗುತ್ತಿದೆ. ಇದನ್ನು ಆಯಾ ಜಿಲ್ಲೆಯಲ್ಲಿ ಎಸ್.ಎಸ್.ಎಲ್.ಸಿ., ಪಿ.ಯು.ಸಿ. ಮತ್ತು ಡಿಗ್ರಿ ಪರೀಕ್ಷೆಗಳಲ್ಲಿ ಪಡೆದ ಅಂಕಗಳ ಅರ್ಹತೆ ಹಾಗೂ ಆಯವ್ಯಯದ ಲಭ್ಯತೆಯಂತೆ ಮಂಜೂರು ಮಾಡಲಾಗುತ್ತಿದೆ.